## ಸಹಬಾಳ್ವೆಯ ಸಂದೇಶ

ಪುದುಚೇರಿಯ ಅರೋವಿಲ್ಲೆಗೆ ಹೋಗುವ ಸುಮಾರು ಎರಡು ಕಿ.ಮೀ. ನಡಿಗೆಯ ಹಾದಿಯಲ್ಲಿ ಅನೇಕ ವೈವಿಧ್ಯಮಯ ಗಿಡಮರಗಳು, ಗುಡಿಸಲಿನಂತಹ ತಂಗುದಾಣಗಳು ಕಾಣಸಿಗುತ್ತವೆ. ಹಾಗೆ ಸಾಗುವಾಗ ಒಂದು ದೊಡ್ಡ ತಾಳೆಮರಕ್ಕೆ ಅರಳಿ ಮರವೊಂದು ಸುತ್ತಲಿಂದಲೂ ತಬ್ಬಿಕೊಂಡು ಮೇಲೇರಿರುವುದು ಗಮನಸೆಳೆಯುತ್ತದೆ. ನಾ ನಿನ್ನ ಬಿಡಲಾರೆ ಎನ್ನುವಂತೆ ತಬ್ಬಿಕೊಂಡು ಬೆಳೆದಿರುವ ಈ ಮರಗಳ ಬೆಸುಗೆಗೆ ಮಾರುಹೋಗುವ ಜನರು ಅವುಗಳ ಪಕ್ಕದಲ್ಲಿ ನಿಂತು ಫೋಟೊ ತೆಗೆಸಿಕೊಳ್ಳುವುದು ಸಹಜವಾಗಿತ್ತು. ಇದು ಪ್ರಕೃತಿ ನಾಶದ ವಿರುದ್ಧ ಗಿಡಮರಗಳೇ ಅಪ್ಪಿಕೋ ಚಳವಳಿಯನ್ನು ಸಾರಿದಂತಿತ್ತು.

–ಶಾಲಿನಿ ನಾಯಕ್, ಬೆಂಗಳೂರು



## ‘ಬುಲ್ ಬುಲ್’ ಮಾತಾಡಿಸಿದ ಮಕ್ಕಳು



ಇಳಿಸಂಜೆ ನಾಲ್ಕಾರು ಶಾಲಾ ಮಕ್ಕಳು ಅಂಗೈಯಲ್ಲಿ ಹಣತೆ ಇಟ್ಟುಕೊಂಡವರಂತೆ ಏನನ್ನೋ ಮುಚ್ಚಿಕೊಂಡು ಬಂದರು. ಅವರ ಬೊಗಸೆಯಲ್ಲಿ ಬೆಳಗುವ ಹಣತೆಯಿರದಿದ್ದರೂ ಕಂಗಳ ತುಂಬ ಕಾಂತಿ ಬೀರುತ್ತಿತ್ತು. ‘ಸಾ ಯಾವ್ದೊ ಗುಬ್ಬಿಮರಿ ಬಿದ್ದುತ್ ಸಾ ಅಲ್ಲಿ’ ಎಂದು ಅಂಗೈಯಗಲಿಸಿ ಒಳಗೆ ಮುದುಡಿ ಕೂತಿದ್ದ ಮರಿಹಕ್ಕಿ ತೋರಿಸಿದರು. ಈಗಷ್ಟೇ ಅಂಬೆರೆಕ್ಕೆ ಬಡಿದು ಹಾರಾಡಲು ಕಲಿಯುತ್ತಿದ್ದ ಆ ಮುಗ್ಧ ಮರಿಹಕ್ಕಿ ‘ಕೆಂಪು ಬಾಲದ ಪಿಕಳಾರ’ (RedVented BulBul) ಆಗಿತ್ತು. ತಲೆಯ ಮೇಲೊಂದು ಕಪ್ಪು ಜುಟ್ಟು, ಬಾಲದ ತುದಿಯಲ್ಲಿ ಕೆಂಪು ಚುಂಚು ಹೊಂದುವ ಆ ಹಕ್ಕಿಯ ಚಿತ್ರ ಸಹಿತ ಮಾಹಿತಿಯನ್ನು ತೇಜಸ್ವಿಯವರ ‘ಹಕ್ಕಿಪುಕ್ಕ’ ಪುಸ್ತಕ ಒದಗಿಸಿತು. ಸದಾ ಸವಿಯಾಗಿ ಹಾಡುತ್ತಾ ಮಕರಂದ ಹಣ್ಣು, ಕೀಟಗಳನ್ನು ಭಕ್ಷಿಸುತ್ತಾ ಜೂನ್–ಸೆಪ್ಟೆಂಬರ್ ಅವಧಿಯಲ್ಲಿ ಗೂಡುಕಟ್ಟುವ ಈ ಹಕ್ಕಿಯ ಹೆಸರು ಹ್ರಸ್ವವಾಗಿ ಬುಲ್ ಬುಲ್ ಎಂದು ತಿಳಿಸಿದೆ.

‘ಲೇ ಇದು ಬುಲ್ ಬುಲ್ ಪಕ್ಷಿ ಅಂತೆಲೇ’ ಎಂದು ಮೊರದಗಲ ಮುಖಮಾಡಿಕೊಂಡು ನಕ್ಕ ಮಕ್ಕಳು ಆ ಮರಿಹಕ್ಕಿಯನ್ನು ಮರಳಿ ಅದರ ಸ್ವಸ್ಥಾನಕ್ಕೆ ಒಯ್ದು ಬಿಡುವ ಹಾಗೂ ಅದರ ಮೇಲೆ ನಿಗಾ ಇಡುವ ವಾಗ್ದಾನ ನೀಡಿ ಹೊರಟರು. ಬಾಲ್ಯದಲ್ಲೇ ಪರಿಸರದೊಂದಿಗೆ ಒಡನಾಟ ಬೆಳೆಸಿಕೊಂಡಿರುವ ಈ ಮಕ್ಕಳು ‘ಬುಲ್ ಬುಲ್ ಮಾತಾಡಕಿಲ್ವಾ?’ ಎಂದು ಸಿನಿಮಾ ಹಾಡು ಹಾಡುತ್ತಾ ಸಾಗಿದರು.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## ಮಳೆಗಾಗಿ ‘ಬಂದ್’

ಮಳೆ ಯಾರಿಗೆ ಬೇಡ. ಮಳೆ ಬಂದರೆ ಇಳೆ. ಇಳೆ ಇದ್ದರೆ ತಾನೇ ನಾಡಿನಲ್ಲಿ ಸಮೃದ್ಧಿ, ಸಂತೋಷ. ಈ ಬಾರಿ ಮುಂಗಾರು ಸಂಪೂರ್ಣ ಕೈಕೊಟ್ಟಿದೆ. ಮಳೆಗಾಗಿ ಉತ್ತರ ಕರ್ನಾಟಕದಲ್ಲಿ ಕತ್ತೆ, ಕಪ್ಪೆ ಮದುವೆ ಮಾಡೋದು ಒಂದು ನಂಬಿಕೆಯಾದರೆ, ಈ ರೀತಿ ಊರಿಗೆ ಊರೇ ವರುಣದೇವನ ಅನುಗ್ರಹಕ್ಕಾಗಿ ‘ಬಂದ್’ ಆಚರಿಸುವುದು ವಿಶೇಷ ನಂಬಿಕೆ.

ಬೆಳಗಾವಿ ಜಿಲ್ಲೆಯ ಮೂಡಲಗಿಯಲ್ಲಿ ಜೂನ್, ಜುಲೈ ತಿಂಗಳಲ್ಲಿನ ನಾಲ್ಕು ಶುಕ್ರವಾರ ಮತ್ತು ಒಂದು ಮಂಗಳವಾರ ಮಳೆಗಾಗಿ ‘ಬಂದ್’ ಆಚರಣೆ ಮಾಡಲಾಗುತ್ತದೆ. ಅಂತೆಯೇ ಈ ಬಾರಿಯೂ ಬಂದ್ ಆಚರಿಸಲಾಯಿತು. ದಿನಸಿ ಅಂಗಡಿ, ಹೋಟೆಲ್, ಪಾನಬೀಡಾ ಅಂಗಡಿ ಸೇರಿದಂತೆ ಸಣ್ಣಪುಟ್ಟ ಅಂಗಡಿಗಳೆಲ್ಲವೂ ಬಂದ್ ಆಗಿದ್ದವು. ಬಂದ್ ದಿನದಂದು ರೈತರು ಕೃಷಿ ಕೆಲಸಗಳಿಗೆ ಹೋಗಲಿಲ್ಲ. ಗೌಂಡಿಗಳು, ಸೆಂಟ್ರಿಂಗ್‌ನವರು, ಕಟ್ಟಡ ಕೆಲಸದವರು, ಬಂಡಿ ಗಾಡಿಯವರು ಸಹ ಬಂದ್‌ಗೆ ಕೈಜೋಡಿಸಿದರು. ಎತ್ತು ಹೂಡಿ ಬಾಡಿಗೆ ಸಹ ಮಾಡಲಿಲ್ಲ. ತರಕಾರಿ ಮಾರುವವರು ತಮ್ಮ ಗಂಟುಗಳನ್ನು ಬಿಚ್ಚಲಿಲ್ಲ. ವೈದ್ಯಕೀಯ ಸೇವೆ, ಶಾಲೆ, ಕಾಲೇಜು, ಸರ್ಕಾರಿ ಕಚೇರಿ ವಾಹನ ಸಂಚಾರ ಹೊರತುಪಡಿಸಿ ಎಲ್ಲ ವ್ಯಾಪಾರ ವಹಿವಾಟಿನವರು ‘ಬಂದ್’ ಹರಕೆ ಆಚರಿಸಿದರು. ಇದೊಂದು ರೀತಿ ದೈವ ಆಚರಣೆಯಂತೆ ನಡೆಯುತ್ತದೆ.

ಸಾಮಾನ್ಯವಾಗಿ ನಡೆಯುವ ಬಂದ್‌ಗಳಲ್ಲಿ ಒತ್ತಾಯ ಕಾಣುತ್ತದೆ. ಆದರೆ ಇಲ್ಲಿನ ಬಂದ್ ಆಚರಣೆಯು ಸ್ವಯಂ ಪ್ರೇರಣೆಯಿಂದ ನಡೆಯುತ್ತದೆ. ಬಂದ್ ಹರಕೆ ದಿನ ಮನೆಗಳಲ್ಲಿ ರೊಟ್ಟಿ, ಚಪಾತಿ, ದೋಸೆಗಳಂಥ ತವಾ ಮೇಲೆ ಬೇಯಿಸಿ, ಕರಿದು ಮಾಡುವ ಖಾದ್ಯ ಸಹ ಮಾಡುವುದಿಲ್ಲ. ಸಾಮಾನ್ಯವಾಗಿ ಮಧ್ಯಾಹ್ನ




ಆಗುತ್ತಿದ್ದಂತೆ ಒಂದಿಷ್ಟು ಭಾಷಣ ಮಾಡಿ, ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಬಂದ್‌ಗೆ ವಿದಾಯ ಹೇಳಿ ವ್ಯಾಪಾರ, ವಹಿವಾಟು ಪ್ರಾರಂಭಿಸುವುದು ವಾಡಿಕೆ. ಆದರೆ ಜೀವಜಲ ಮಳೆಗಾಗಿ ಆಚರಿಸುವ ಈ ಬಂದ್‌ನಲ್ಲಿ ಸಂಜೆ ಸರಿದರೂ ಅಂಗಡಿಗಳು ತೆರೆಯದೆ ಇಡೀ ದಿನ ಕಟ್ಟಾ ಬಂದ್ ಆಚರಿಸಲಾಗುತ್ತದೆ. ಅಷ್ಟೇ ಏಕೆ, ಬಾರ್‌ಗಳು ಸಹ ಮುಚ್ಚುವುದರಿಂದ ಪಾನಪ್ರಿಯರು ಸಹ ಬಾರ್‌ಗಳತ್ತ ಸುಳಿಯದೆ ಬಂದ್‌ಗೆ ಬದ್ಧರಾಗಿರುತ್ತಾರೆ. ಬಂದ್ ಪ್ರಾರ್ಥನೆಯೆಂಬಂತೆ ಈಗ ಎಲ್ಲೆಡೆ ಮಳೆ ಸುರಿಯುತ್ತಿದೆ.

–ಬಾಲಶೇಖರ ಬಂದಿ, ಮೂಡಲಗಿ